**<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ</u>**

**ಸಿ.ಸಿ ಃ 1 /2022**

**ಸಾಕ್ಷಿದಾರರ ಹೆಸರು ಃ ಪ್ರವೀಣ್ ಕುಮಾರ್**

**ಸಿ.ಡಬ್ಲ್ಯೂ - 07**

**ತಂದೆಯ ಹೆಸರು ಃ ಆರ್ ಗಣೇಶ್**

**ಪಿ.ಡಬ್ಲ್ಯೂ - 06**

**ವಯಸ್ಸು ಃ 45 ವರ್ಷ**

**ಉದ್ಯೋಗ ಃ ಉಪ ತಹಶೀಲ್ದಾರ್**

**ವಾಸಸ್ಥಳ ಃ ಶೃಂಗೇರಿ**

**ದಿನಾಂಕಃ 27.06.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ</u>**

ದಿಃ 14/07/2017 ರಿಂದ 25/09/2019 ರವರೆಗೆ ನಾನು ಶೃಂಗೇರಿ RI (Revenue Inspector) ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ 1, 4 ರಿಂದ 6 ನನಗೆ ಗೊತ್ತು. ದಿಃ 20/12/2018 ರಂದು ನ್ಯಾಯಾಧೀಶರು ಶೃಂಗೇರಿ ಸರ್ವೇ ನಂಬರ್ 234/1 ರಿಂದ 4 ಹಾಗೂ ಸರ್ವೇ ನಂಬರ್ 215 ಗೆ ಬಂದು ನಮ್ಮನ್ನು ಕರೆಸಿದ್ದು, ನಾವು ಸ್ಥಳಕ್ಕೆ ಹಾಜರಾಗಿ ಸದರಿ ಸರ್ವೇ ನಂಬರ್ 215 ರಲ್ಲಿ ನೆಲ ಸಮತಟ್ಟು ಮಾಡಿದ್ದು, ಸದರಿ ಜಮೀನಿನಲ್ಲಿ ಬೇಲಿ ಇರುವುದರಿಂದ ಯಾವ ಜಾಗ ಎಂದು ತಿಳಿದುಕೊಳ್ಳಲು ಮಾನ್ಯ ನ್ಯಾಯಾಧೀಶರು ತಹಶೀಲ್ದಾರರವರಿಗೆ ಸದರಿ ಸ್ಥಳವನ್ನು ಅಳತೆ ಮಾಡಿ ಸರ್ಕಾರಿ ಜಾಗವೋ ಅಥವಾ ಖಾಸಗಿ ಜಾಗವೋ ಎಂದು ಮಾಹಿತಿ ನೀಡಲು ಮೌಖಿಕವಾಗಿ ಸೂಚನೆ ನೀಡಿರುತ್ತಾರೆ. ತಹಶೀಲ್ದಾರವರಿಗೆ ನ್ಯಾಯಾಲಯದಿಂದ ಜಮೀನು ಸರ್ವೇ ನಂಬರ್ 215 ರಲ್ಲಿರುವ ಜಮೀನು ಸಮತಟ್ಟು ಮಾಡಿದ್ದರಿಂದ ಹಾನಿ ಉಂಟಾಗಬಹುದೇ ಎಂದು ಮಾಹಿತಿ ಕೇಳಿ ಪತ್ರ ಬಂದಿದ್ದು, ಈ ಸಂಬಂಧ ತಹಶೀಲ್ದಾರ್ ಕಚೇರಿಯಿಂದ ನನಗೆ ಹಾಗೂ ಚಾಸಾ 5 ರವರಿಗೆ ವರದಿ ನೀಡಲು ಸೂಚಿಸಿದ್ದು, ಸದರಿ ಸ್ಥಳದಲ್ಲಿ ಬೇಲಿ ಇರುವುದರಿಂದ ಬೇಲಿಯಲ್ಲಿರುವ ಸಂಪೂರ್ಣ ಸ್ಥಳ ಅಳತೆ ಮಾಡಿದಾಗ ಸರ್ವೇ ನಂಬರ್ 234/1 ರಿಂದ 4 ಮಾಲೀಕದಾರರು ಸರ್ವೇ ನಂಬರ್ 215 ನ್ನು ನೆಲಸಮ ಮಾಡಿರುವುದಾಗಿ ಕಂಡು ಬಂದಿದ್ದು ನಾನು ಈ ಬಗ್ಗೆ ವರದಿ ನೀಡಿರುತ್ತೇನೆ. ಸಾಕ್ಷಿಯು ವರದಿಯನ್ನು ನೋಡಿ

ಗುರುತಿಸಿದ್ದು ಅದನ್ನು ನಿಪಿ 9 ಎಂದು ಗುರುತಿಸಲಾಯಿತು. ಈ ಸಂಬಂಧ ಪೋಲಿಸರು ನನ್ನ ವಿಚಾರಿಸಿದ್ದು ಅವರಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಐ ಎಸಿ ಟಿ ವಕೀಲರಿಂದ ಃ</u>**

ನನಗೆ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಲು ಲಿಖಿತ ಆದೇಶ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಅಳತೆಗೆ ಹೋದಾಗ ಸರ್ವೇ ನಂಬರ್ 234 ಆರೋಪಿಗೆ ಸಂಬಂಧ ಪಟ್ಟಿದ್ದು ಎಂದು ನನಗೆ ಮಾಹಿತಿ ಇತ್ತು. ನಾವು ಸ್ಥಳ ಪರಿಶೀಲನೆ ಮಾಡುವ ಮೊದಲು ಆರೋಪಿಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ. ನಾನು ಸ್ಥಳದಲ್ಲಿ ಹಾಜರಿದ್ದೆ ಎಂದು ತೋರಿಸಲು ನಾನು ಯಾವುದೇ ಸಹಿ ಮಾಡಿರುವುದಿಲ್ಲ. ನಿಪಿ 9 ಮೂಲ ದಾಖಲೆ ಎಲ್ಲಿ ಇದೆ ಎಂದು ಈಗ ಹೇಳಲು ಆಗುವುದಿಲ್ಲ. ನಾನು ಸ್ಥಳಕ್ಕೆ ಹೋಗಿರುವ ಸಂಬಂಧ ಮತ್ತು ನನ್ನ ಸಮಕ್ಷಮ ನಕಾಶೆ ತಯಾರಿಸಿರುತ್ತಾರೆಂದು ಹೇಳಲು ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿ ನಾನು ನಕಾಶೆಗೆ ಸಹಿ ಮಾಡಿರುತ್ತೇನೆಂದು ನುಡಿದಿರುತ್ತಾರೆ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ ಸ್ಥಳದಲ್ಲಿ ಯಾವುದೇ ಅನಾಹುತ ಕಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 27.06.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

Sd/-
**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**